ಆಪರೇಟ್ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಮಾನ್ಯ ಸದಸ್ಯರು ಹಲವಾರು ತಿಂಗಳಿಂದ ತಮ್ಮನ್ನು ಕೇಳುತ್ತಿದ್ದಾರೆ ಅವರಿಗೆ ಅಸ್ವಸ್ಥತೆಯಿಂದ ಬರಲಿಕ್ಕಾಗಲಿಲ್ಲ. ಕ್ಷಯರೋಗ ಯೂನಿಟ್‌ಗೆ ಎಕ್ಸರೇ ಬಹಳ ಅವಶ್ಯಕತೆ ಇದೆ. ಎಕ್ಸರೇ ಯೂನಿಟ್ ಇಲ್ಲಿ ಬಂದಿದೆ ಅದಕ್ಕೆ ಸಂಬಂಧಪಟ್ಟ ತಂತ್ರಜ್ಞರು ಇಲ್ಲದೆ ತೊಂದರೆಯಾಗುತ್ತಿದೆ. ಯಾವಾಗ ಇದನ್ನು ಕೊಡುತ್ತೀರಿ?

ಡಾ॥ ಹೆಚ್. ಸಿ. ಮಹದೇವಪ್ಪ: ಮಾನ್ಯ ಸದ್ಯರು ಕಳೆದ ಸಾರಿ ಖುದ್ದಾಗಿ ಭೇಟಿ ಮಾಡಿ ಹೇಳಿದ್ದರು. ಹಳೆಯ ಎಕ್ಸರೇ ಯೂನಿಟ್ ಬದಲಾವಣೆ ಮಾಡಿ ಹೊಸದನ್ನು ಕೊಟ್ಟಿದ್ದೇವೆ. ತಂತ್ರಜ್ಞಾನದಲ್ಲಿ ಬಳಸುವುದಕ್ಕೆ ಬರದೆ ಪುನ: ಕೆಟ್ಟಿದೆ ಎಂದು ಹೇಳಿದ್ದರು. ಕಳೆದ ವಾರವೇ ನಮ್ಮ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಅದು ಕೆಲಸ ಮಾಡುವ ರೀತಿ ಮಾಡುತ್ತೇನೆ.

ವಾಣಿಜ್ಯ ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶ ಕಡಿಮೆಯಾಗುತ್ತಿರುವುದು

108 (715) ಶ್ರೀ ಅಗರ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

1) ವಾಣಿಜ್ಯ (ಬೆರಳಚ್ಚು ಮತ್ತು ಶೀಘ್ರಲಿಪಿ) ಶಿಕ್ಷಣಕ್ಕೆ ವಿದ್ಯಾರ್ಥಿಗಳ ಪ್ರವೇಶ ಇತ್ತೀಚಿನ ವರ್ಷಗಳಲ್ಲಿ ಕಡಿಮೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಹೆಚ್ಚಿನ ಬಂಡವಾಳದೊಂದಿಗೆ ಆರಂಭಿಸಿರುವ ಈ ಶಾಲೆಗಳ ವ್ಯವಸ್ಥಾಪಕರುಗಳು ಆರ್ಥಿಕ ಸಂಕಷ್ಟದಲ್ಲಿದ್ದು, ಅವರಿಗೆ ನೆರವು ನೀಡುವ ಬಗ್ಗೆ ಸರ್ಕಾರದ ಏನಾದರೂ ಯೋಜನೆ ರೂಪಿಸಿದೆಯೇ?

3) ಸರ್ಕಾರದ ನೇಮಕಾತಿಗಳಲ್ಲಿ ಬೆರಳಚ್ಚು ಜ್ಞಾನವನ್ನು ಕಡ್ಡಾಯಮಾಡುವ ಅಥವಾ ಕಂಪ್ಯೂಟರ್ ಶಿಕ್ಷಣವನ್ನು ವಾಣಿಜ್ಯ ಶಿಕ್ಷಣಕ್ಕೆ ಸೇರಿಸಿ ಭೋದಿಸುವ ಪಠ್ಯ ಕ್ರಮ ಅಳವಡಿಸುವ ಕುರಿತು ಸರ್ಕಾರದ ಕಡೆಯಿಂದ ಏನಾದರೂ ಚಿಂತನೆ ನಡೆದಿದೆಯೇ, ಇಲ್ಲವಾದಲ್ಲಿ ಈ ಯೋಜನೆಗಳನ್ನು ಅಳವಡಿಸಲು ಯಾವ ರೀತಿ ಕ್ರಮ ಕೈಗೊಳ್ಳಲಾಗುವುದು.

ಡಾ॥ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

1) ಹೌದು

2) ಇಲ್ಲಾ

3) ಸರ್ಕಾರದ ಸಾಮಾನ್ಯ ನೇಮಕಾತಿ ನಿಯಮದಲ್ಲಿ ಬೆರಳಚ್ಚು ಕಡ್ಡಾಯಗೊಳಿಸಿಲ್ಲ. ಪ್ರಾಥಮಿಕ ಹಂತದ ಕಂಪ್ಯೂಟರ್ ಶಿಕ್ಷಣವನ್ನು ವಾಣಿಜ್ಯ ಶಾಲೆಗಳಲ್ಲಿ ಅಳವಡಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಆರಗ ಜ್ಞಾನೇಂದ್ರ: ಸರಕಾರಿ ಮತ್ತು ಖಾಸಗಿ ಸಂಸ್ಥೆಗಳಿಗೆ ದೈನಂದಿನ ಕೆಲಸ ಸುಗಮವಾಗುವುದಕ್ಕೆ 1ನೇ, 2 ನೇ ದರ್ಜೆ ಗುಮಾಸ್ತರುಗಳಿಗೆ ಟೈಪಿಂಗ್ ತರಬೇತಿ ಕೊಡುವ ಮೂಲಕ ಹಲವಾರು ವರ್ಷಗಳಿಂದ ಈ ರಾಜ್ಯದಲ್ಲಿನ ಕಾಮರ್ಸ್ ಸಂಸ್ಥೆಗಳು ಒದಗಿಸುತ್ತಾ ಬಂದಿದೆ. ಸರಕಾರ ಇದಕ್ಕಾಗಿ ಅವರಿಗೆ ಯಾವುದೇ ಅನುದಾನ ಸಹಾಯ ಕೊಟ್ಟಿರುವುದಿಲ್ಲ. ಆದರೂ ಕೂಡ ಅವರು ಅನೂಚಾನವಾಗಿ ನಡಿಸಿಕೊಂಡು

ಬಂದಿದ್ದಾರೆ ಇದರಿಂದಾಗಿ ಬಹಳ ಸಹಾಯವಾಗಿದೆ. ಆದರೆ ಇಂದು ಆ ಸಂಸ್ಥೆಗಳಿಗೆ ಸೇರತಕ್ಕಂಥ ಅಭ್ಯರ್ಥಿಗಳ ಸಂಖ್ಯೆ ಕಡಿಮೆಯಾಗಿದೆ. ಅದರ ಮೇಲೆಯೇ ಅವಲಂಬಿತವಾಗಿರತಕ್ಕಂತಹ ಸಂಸ್ಥೆಗಳ ಮಾಲೀಕರು ಇಂದು ಅನ್ನ ಇಲ್ಲದೇ ಇರುವ ಸ್ಥಿತಿಗೆ ಇಳಿದಿದ್ದಾರೆ. ಸರಕಾರದ 1-2 ನೇ ದರ್ಜೆ ಗುಮಾಸ್ತರುಗಳಿಗೆ ಟೈಪಿಂಗ್ ತರಬೇತಿ ಅವಶ್ಯಕತೆ ಇದನ್ನು ಕಡ್ಡಾಯ ಮಾಡುವುದು ಸರಕಾರದ ಪರಿಶೀಲನೆಯಲ್ಲಿ ಇಲ್ಲವೆಂದು ಹೇಳಿದ್ದೀರಿ. ಆದರೆ ಕೇಂದ್ರ ಸರಕಾರ ಈಗಾಗಲೇ ಇದನ್ನು ಕಡ್ಡಾಯ ಮಾಡಿದೆ. ಅದೇ ರೀತಿ ಸರಕಾರವೂ ಕೂಡ 1-2 ನೇ ದರ್ಜೆ ಗುಮಾಸ್ತರಿಗೆ ಟೈಪಿಂಗ್ ತರಬೇತಿ ಕಡ್ಡಾಯಗೊಳಿಸುವುದಕ್ಕೆ ಆಗುವುದಿಲ್ಲವೇ? ಆ ಸಂಸ್ಥೆಗಳವರು ಕಂಪ್ಯೂಟರ್ ಶಿಕ್ಷಣವನ್ನು ಅಳವಡಿಸಲಿಕ್ಕೆ ತಾವು ಅನುಮತಿಯನ್ನು ಕೊಟ್ಟರೆ ಅನುಕೂಲವಾಗುತ್ತದೆ. ಇದರ ಬಗ್ಗೆ ಸರಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇಗೌಡ : ಇತ್ತೀಚೆಗೆ ಕಂಪ್ಯೂಟರ್ ಯುಗ ಹೆಚ್ಚುತ್ತಿದೆ. ಎಲ್ಲಾ ಕ್ಷೇತ್ರದಲ್ಲೂ ಇದು ಜಾರಿಗೆ ಬಂದಿದೆ. ಖಾಸಗಿಯವರೇನು ಪ್ರಾರಂಭಮಾಡಿದ್ದಾರೆ ಅದನ್ನು ಅವರೇ ನಡೆಸಿಕೊಳ್ಳುತ್ತಾರೆ. ನಾವೇನು ನಡೆಸುತ್ತಿದ್ದೇವೆ ಅದನ್ನು ನಾವೂ ನೋಡಿಕೊಂಡು ಮಾಡಬೇಕಾಗುತ್ತದೆ. ಪ್ರತಿಯೊಂದು ಕಡೆಯಲ್ಲೂ ಕಂಪ್ಯೂಟರ್‌ಗೆ ಹೆಚ್ಚು ಇಂಪಾರ್ಟೆನ್ಸ್ ಇದೆ. ಇದನ್ನು ಯಾರ್ಯಾರು ಪ್ರಾರಂಭ ಮಾಡಿದ್ದಾರೆ ಅವರೆ ನೋಡಿಕೊಂಡು ಬದಲಾವಣೆಗೆ ಅನುಗುಣವಾಗಿ ಅವರು ಕಾರ್ಯಕ್ರಮಗಳನ್ನು ನಡೆಸಿಕೊಂಡು ಬಂದರೆ ಹೆಚ್ಚು ಅನುಕೂಲವಾಗುತ್ತದೆ. ಸರಕಾರಕ್ಕೆ ಇದಕ್ಕೆ ಇನ್ನು ಮುಂದೆ ಪ್ರೋತ್ಸಾಹ ಕೊಡತಕ್ಕಂಥಾದ್ದು ಇಲ್ಲ. ಈಗ ಏನು ನಾನು ತಮಗೆ ಹೇಳಿದ್ದೇನೆ ಅದರಂತೆ ಕಡ್ಡಾಯ ಮಾಡುವುದಕ್ಕಾಗುವುದಿಲ್ಲ. ಸಾಮಾನ್ಯ ನೇಮಕಾತಿಯ ವಿಚಾರದಲ್ಲಿ ಬೆರಳಚ್ಚು ಕಡ್ಡಾಯ ಮಾಡುವುದಕ್ಕೆ ಸರಕಾರ ಯೋಚನೆ ಮಾಡಿಲ್ಲ. ಸಧ್ಯದ ಪರಿಸ್ಥಿತಿಯಲ್ಲಿ ಅದನ್ನು ಕಡ್ಡಾಯ ಮಾಡುವುದಕ್ಕಾಗುವುದಿಲ್ಲ. ಇದರ ಬಗ್ಗೆ ಸರಕಾರ ಯಾವುದೇ ರೀತಿಯ ಪ್ರೋತ್ಸಾಹ ಕೊಡುವುದಕ್ಕಾಗುವುದಿಲ್ಲ ಈಗೇನು ಇದೆ ಅದನ್ನೇ ಕಂಟಿನ್ಯೂ ಮಾಡಿಕೊಂಡು ಹೋಗಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಕಛೇರಿಗಳಲ್ಲಿ 1-2 ನೇ ದರ್ಜೆ ಗುಮಾಸ್ತರುಗಳನ್ನು ಇಟ್ಟುಕೊಳ್ಳುವುದಲ್ಲದೆ ಸ್ಟೆನೋಗಳನ್ನು ಬೇರೆ ನೇಮಕಾತಿ ಮಾಡಿಕೊಳ್ಳಬೇಕಾಗುತ್ತದೆ. ಅಲ್ಲಿರತಕ್ಕಂತಹ ಸಿಬ್ಬಂದಿಗೇ ಇದರ ತರಬೇತಿಯನ್ನು ಅಳವಡಿಸಿದರೆ ಅದನ್ನು ಪ್ರತ್ಯೇಕವಾಗಿ ಆಯ್ಕೆ ಮಾಡುವ ಕಷ್ಟ ಮತ್ತು ವೆಚ್ಚ ಕೂಡ ಕಡಿಮೆದಯಾಗುತ್ತದೆ. ಇದನ್ನು ಕಡ್ಡಾಯ ಮಾಡುವುದರಲ್ಲಿ ಸರಕಾರಕ್ಕೇನೂ ನಷ್ಟವಿಲ್ಲವೆಂದು ಅನ್ನಿಸುತ್ತದೆ. ತಾವು ಕಂಪ್ಯೂಟರ್ ತರಬೇತಿಗೆ ಅವಕಾಶ ಕೊಟ್ಟರೆ ಅದನ್ನು ಮಾಡಲಿಕ್ಕೆ ಅವರು ತಯಾರಿದ್ದಾರೆ. ಸರಕಾರ ಇದಕ್ಕೆ ಅನುಮತಿ ಕೊಟ್ಟು ಆದೇಶಕ್ಕಾಗಿ ಇದನ್ನು ಮಾಡಬೇಕು. ಇದನ್ನು ಯಾವಾಗ ಮಾಡುತ್ತೀರಿ ಸಧ್ಯದಲ್ಲೇ ಮಾಡುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಹೆಚ್. ಜಿ. ಗೋವಿಂದೇ ಗೌಡ : ಇದು ಹೊಸ ವಿಷಯವಾಗಿರುವುದರಿಂದ ಪರಿಶೀಲನೆ ಮಾಡಿ ನೋಡುತ್ತೇನೆ.